ಪ್ರಾಯ ಮಿತಿಮೀರಿದವರು ಇದ್ದಾರೆ. ಅವರಿಗೆ ವಿದ್ಯೆ ಇರುವುದಿಲ್ಲ. ಆದ್ದರಿಂದ ಅವರಿಗೆ ಹೆಚ್ಚು ಹೆಚ್ಚು ಮೆಕನೈಜ್ಡ್ ಬೋಟ್‌ಗಳನ್ನು ಸರ್ಕಾರವು ಮೂಲಕ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೆಕನೈಜ್ಡ್ ಬೋಟ್‌ಗಳು ಬೇಕೆಂದು ರಂಪೋಣಿ ಬರೆ ಉಪಯೋಗಿಸುವವರು ಅರ್ಜಿಯನ್ನು ಹಾಕಿಕೊಂಡರೆ, ಅದರಲ್ಲಿ ಟ್ರೈನಿಂಗ್ ಆದವರಿಗೆ ಅದನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

Grant of Lands in Amrutha Mahal Kaval

113 Sri M. H. JAYAPRAKASH NARAYAN (Sirsi).—

Will the Minister for Revenue be pleased to state.—

(*a*) whether the State Government has decided to grant lands in Amrutha Mahal Kaval to educated unemployees ;

(*b*) whether Land Grant Rules will be followed while granting the lands ?

Sri H. V. KOUJALGI (Minister for Revenue).—

(*a*) No.

(*b*) The question of granting land is still under consideration.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ವಿಶೇಷ ರೀತಿಯಲ್ಲಿ ಆಹಾರ ಬೆಳೆಯು ಬೇಕೆಂದು ರಾಜ್ಯ ಸರ್ಕಾರ ಈಗ್ಗೆ ಒಂದು ವರ್ಷದ ಹಿಂದೆ ನುಮಾರು 27 ಸಾವಿರ ಅಥವಾ 57 ಸಾವಿರ ಎಕರೆಯನ್ನು ಈ ಅಮೃತ ಮಹಲ್ ಕಾವಲಿನಲ್ಲಿ ಬಿಡುಗಡೆ ಮಾಡುವುದಕ್ಕೆ ಸರ್ಕಾರೀ ಹುಕುಂ ಆಗಿತ್ತು. ಅದರ ಪ್ರಕಾರ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಬಿಡುಗಡೆಯಾಗಿದೆ ? ಇದನ್ನೇ ನಾದರೂ ರೆವಿನ್ಯೂ ಇರಾಖೆಗೆ ವಹಿಸಿದ್ದೀರಾ ? ಯಾವ ತತ್ವದಮೇರೆ ಇದನ್ನು ಹಂಚುತ್ತೀರಿ ?

(*No answer*)

Sri M. H. JAYAPRAKASH NARAYAN.—I have put a relevant question whether the Government has taken any decision to release the Amrit Mahal Kaval lands.

Mr. SPEAKER.—The hon'ble Minister says that no decision is taken.

ಶ್ರೀ ಎಂ ಎಚ್. ಜಯಪ್ರಕಾಶ್ ನಾರಾಯಣ್.—ಅಮೃತಮಹಲ್ ಕಾವಲ್‌ನಿಂದ ಜಮೀನನ್ನು ಸರ್ಕಾರದವರು ಬಿಡುಗಡೆಮಾಡಬೇಕೆಂದು ಸರ್ಕಾರೀ ಹುಕುಂ ಆಗಿದೆ ಎಂಬುದು ನಿಜವೇ ಅಥವಾ ಇಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಹಿಂದೆ ಬಿಡುಗಡೆಯಾದುದು ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ. ಅದನ್ನು ಅಲ್ಲಿ ಬಿಡುಗಡೆ ಮಾಡಬಾರದೆಂದು ಹೇಳಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—(೮)ಗೆ ಉತ್ತರವಾಗಿ ವಿಶೇಷವಾರಿ ಮಾಡುವ ವಿಷಯ ಇನ್ನೂ ಪರಿಶೀಲನೆಯಲ್ಲಿದೆಯೆಂದು ಹೇಳಿದೆ. ಅದನ್ನು ಎಷ್ಟು ದಿವಸಗಳಲ್ಲಿ ವಿಶೇಷವಾರಿ ಮಾಡುತ್ತೀರಿ ? ಪರಿಶೀಲನೆಯನ್ನು ಪೂರ್ಣ ಮಾಡುವುದು ಯಾವಾಗ ? ವಿದ್ಯಾವಂತ ನಿರುದ್ಯೋಗಿಗಳಿಗೆ ಜಮೀನನ್ನು ಕೊಡುವ ತತ್ವವನ್ನೇನಾದರೂ ದೃಷ್ಟಿಯಲ್ಲಿಟ್ಟುಕೊಂಡಿದ್ದೀರಾ ?

ಶ್ರೀ ಎಚ್. ವಿ. ಕೌಜಲಗಿ.—ಈ ಬಗ್ಗೆ ಒಂದು ಕಮಿಟಿಯನ್ನು ನೇಮಿಸಿ ಅದರ ಮುಂದೆ ಎಲ್ಲ ವಿಷಯುಗಳನ್ನು ಇಟ್ಟಿದೆ. ಅವರು ಏನು ನಿರ್ಣಯ ತೆಗೆದುಕೊಳ್ಳುತ್ತಾರೆ ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

Sri H. SIDDAVEERAPPA.—May I know from the Hon'ble Minister whether any Amrit Mahal Kaval lands have been released for cultivation in the State ? If the answer is no, when was that order revised ?

Sri H. V. KOUJALGI.—So far as I remember, after the new Ministry came into office, no land from that area has been released.

ಶ್ರೀ ಕೆ. ಎಂ. ತಮ್ಮಯ್ಯ.—ಹಿಂದಿನ ಸರ್ಕಾರದ ಆಜ್ಞೆ ಪ್ರಕಾರ ಅಮೃತ ಮಹಲ್ ಕಾವಲಿನ ಸುಮಾರು 22 ಸಾವಿರ ಎಕರೆ ಪ್ರದೇಶವನ್ನು ರಿಲೀಸ್ ಮಾಡಲಾಗಿದೆ. ಅದಕ್ಕಿಂತ ಮುಂಚೆಯೇ ಅನೇಕ ಜನ ಆ ಜಮೀನು ಮೇಲೆ ಇದ್ದಾರೆ. ಅವರ ಬಗ್ಗೆ ಯಾವ ರೀತಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ ?

Sri H. V. KOUJALGI.—If they are unuthorised cultivators they will have to be evicted.

ಶ್ರೀ ಎಸ್. ಬಂಗಾರಪ್ಪ.—ಅಮೃತ ಮಹಲ್ ಕಾವಲ್ ಜಮೀನು ವಿಲೇವಾರಿ ಮಾಡುವ ಬಗ್ಗೆ ಒಂದು ಕಮಿಟಿಯನ್ನು ನೇಮಿಸಲಾಗಿದೆ ಎಂದು ಮಾನ್ಯ ಮಂತ್ರಿಗಳು ಈಗತಾನೆ ಹೇಳಿದರು. ಆ ಸಮಿತಿಗೆ ರಫರ್ ಮಾಡಿರುವ ವಿಚಾರಗಳೇನು ? ವಿದ್ಯಾವಂತ ನಿರುದ್ಯೋಗಿಗಳಾದವರಿಗೆ ಅದನ್ನು ಹಂಚಬೇಕು ಎಂದೋ ಅಥವಾ ಜಮೀನಿಲ್ಲದೆ ಇರತಕ್ಕ ಯಾರಿಗಾದರೂ ಹಂಚಿಕೆ ಮಾಡುವುದಕ್ಕೂ ಅವಕಾಶವಿರಬೇಕು ಎನ್ನುವ ಯೋಜನೆ ಇದೆಯೋ ?

ಶ್ರೀ ಎಚ್. ವಿ. ಕೌಜಲಗಿ.—ಆ ಕಮಿಟಿ ಮುಂದೆ ಬಡವರಿಗೆ ಕೊಡಬೇಕು ಮತ್ತು ವಿದ್ಯಾವಂತ ನಿರುದ್ಯೋಗಿಗಳಿಗೂ ಕೊಡಬೇಕು ಎನ್ನುವ ವಿಚಾರವಿದೆ.

ಶ್ರೀ ಬಿ. ಪರಮೇಶ್ವರಪ್ಪ —ಈಗಾಗಲೇ ಸುಮಾರು 22 ಸಾವಿರ ಎಕರೆ ಜಮೀನು ವಿಲೇವಾರಿ ಮಾಡುವ ಅಭಿಪ್ರಾಯದಿಂದ ಬಿಡುಗಡೆ ಮಾಡಿದ್ದಾರೆ. ಅದನ್ನು ಕಂದಾಯ ಇಲಾಖೆಗೆ ವರ್ಗ ಮಾಡಿರತಕ್ಕದ್ದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೇ ಸ್ವಾಮಿ ?

ಶ್ರೀ ಎಚ್. ವಿ. ಕೌಜಲಗಿ.—ಆ ಪ್ರಕಾರ ಕೊಡಬೇಕೆಂದು ಹೊರಟಿದ್ದ ಸರ್ಕಾರಿ ಆಜ್ಞೆಯನ್ನು ತಡೆ ಹಿಡಿಯಲಾಗಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಸರ್ಕಾರದ ಜಮೀನನ್ನು ಯಾರು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆಯೋ ಅವರಿಗೇ ಖಾಯಂ ಮಾಡಲಾಗುವುದೆಂದು ಹೇಳಿದ್ದರು. ಈಗ ಅಂಥವರನ್ನು ಎವಿಕ್ಟ್ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇವರೆಡರಲ್ಲಿ ಯಾವುದು ಸರಿ ಸ್ವಾಮಿ ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಹೇಳುವಂತೆ ಸರ್ಕಾರ ಯಾವಾಗಲೂ ಆ ರೀತಿ ಹೇಳಿಲ್ಲ. ಈಗ ಇದ್ದ ಕಾಯಿದೆಯ 94ನೆ ಕಲಂ ಪ್ರಕಾರ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವುದನ್ನು ಹೊರಗೆ ಹಾಕಲೇ ಬೇಕಾಗುತ್ತದೆ. ಆದರೆ ಈಗಿರುವ ಕಾಯಿದೆಯನ್ನು ಮರುಸ್ಥಾಪಿಸಿದ ನಂತರ ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆಂದು ಮಾತ್ರ ಹೇಳಿದ್ದೇನೆ.

Sri H.SIDDAVEERAPPA.—The Hon. Minister was pleased to state that after the new Ministry came into office the revised order was passed not to release the lands, will a copy of the Government Order issued in this connection be placed on the Table ?

Sri H. V. KOUJALGI.—We have instructed revenue officers to withold granting of lands till next August. These are all administrative orders.

ಶ್ರೀ ಎಂ. ಎಸ್. ಕೃಷ್ಣನ್.—ಈಗಿನ ಮಂತ್ರಿ ಮಂಡಲ ಭೂಮಿಯನ್ನು ವಿಲೇವಾರಿ ಮಾಡ ಕೂಡದೆಂದು ತೀರ್ಮಾನ ಮಾಡಿರುವುದಾಗಿ ಹೇಳಿದರು. ಹಿಂದಿನ ಮಂತ್ರಿ ಮಂಡಲ ಎಷ್ಟು ಭೂಮಿಯನ್ನು ವಿಲೇವಾರಿ ಮಾಡಿದೆ ಎನ್ನುವುದನ್ನು ಹೇಳಲಿಕ್ಕೆ ಆಗುತ್ತದೆಯೇ ?

Sri H. V.KOUJALGI.—I want notice.